# <u>ಪ್ರಕಟಣೆ</u>

2020-21ನೇ ಸಾಲಿನ ಬಿ.ಇಡಿ ಕೋರ್ಸಿಗೆ ಸಂಬಂಧಿಸಿದಂತೆ ಸರ್ಕಾರಿ ಕೋಟಾದಡಿ ಲಭ್ಯವಿರುವ ಸೀಟುಗಳಿಗೆ ಆಯ್ಕೆ ಪಟ್ಟಿಯನ್ನು ದಿನಾಂಕ: 04-03-2021ರಂದು ಪ್ರಕಟಿಸಿ, ಪಟ್ಟಿಯಲ್ಲಿನ ಅಭ್ಯರ್ಥಿಗಳ ದಾಖಲಾತಿಗಾಗಿ ದಿನಾಂಕ: 20-03-2021ರವರೆಗೆ ಕಾಲಾವಕಾಶ ನೀಡಲಾಗಿತ್ತು.

ದಿನಾಂಕ: 04-03-2021ರಂದು ಪ್ರಕಟಿಸಲಾದ ಕಾಲೇಜು ಸಹಿತ ಸೀಟು ಹಂಚಿಕೆಯ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಹಾಗೂ ದಿನಾಂಕ: 24-03-2021ರಂದು ಪ್ರಕಟಿಸಿದ ಮೊದಲ ಸುತ್ತಿನ ಎರಡನೇ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ದಾಖಲಾತಿ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಮೊದಲ ಸುತ್ತಿನ ದಾಖಲಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಅಭ್ಯರ್ಥಿಗಳು ದಾಖಲಾದ ಬಗ್ಗೆ ವಿವರಗಳನ್ನು ನೋಡಲ್ ಕೇಂದ್ರಗಳು ಹಾಗೂ ಕಾಲೇಜುಗಳಿಂದ ಸಲ್ಲಿಕೆಯಾದ ಮಾಹಿತಿಗಳನ್ನಾಧರಿಸಿ ಉಳಿದ ಸೀಟುಗಳಿಗೆ ನಿಯಮಾನುಸಾರ Seat Matrix ಅನ್ನು ದಿನಾಂಕ: 26-03-2021ರಂದು ಪ್ರಕಟಿಸಲಾಗಿತ್ತು. Seat Matrix ಅನ್ನು ಪರಿಶೀಲಿಸಿಕೊಂಡು ಅಭ್ಯರ್ಥಿಗಳು ದಾಖಲಾತಿ ಬಯಸುವ ಕಾಲೇಜುಗಳಿಗೆ ಆಯ್ಕೆಗಳನ್ನು (Option Entry) ದಾಖಲಿಸಲು ದಿನಾಂಕ: 29-03-2021ರವರೆಗೆ ಅವಕಾಶ ಕಲ್ಪಿಸಲಾಗಿತ್ತು.

ಈ ಅವಕಾಶವನ್ನು ಬಳಸಿಕೊಂಡು ಅಭ್ಯರ್ಥಿಗಳು ದಾಖಲಿಸಿದ ಆಯ್ಕೆಗಳನ್ನು ಪರಿಗಣಿಸಿ ಮೆರಿಟ್ ಹಾಗೂ ರೋಸ್ಟರ್ ಅನ್ವಯ **ಎರಡನೇ ಸುತ್ತಿನ ಸೀಟು ಹಂಚಿಕೆ ಪಟ್ಟಿಯನ್ನು ದಿನಾಂಕ: 29-03-2021ರಂದು www.schooleducation.kar.in ನಲ್ಲಿ ಪ್ರಕಟಿಸಿದೆ.**

ಎರಡನೇ ಸುತ್ತಿನ ಸೀಟು ಹಂಚಿಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ತಮಗೆ ಹಂಚಿಕೆಯಾದ ಕಾಲೇಜಿಗೆ ದಾಖಲಾತಿ ಹೊಂದಲು ನಿಯಮಾನುಸಾರ ನಿಗದಿಪಡಿಸಿದ ಶುಲ್ಕವನ್ನು (ಅಧಿಸೂಚನೆಯಲ್ಲಿ ನಮೂದಿಸಿರುವಂತೆ) ತಮ್ಮ Username ಮತ್ತು Password ಅನ್ನು

ನಮೂದಿಸುವುದರೊಂದಿಗೆ Login ಆಗಿ ಆನ್ ಲೈನ್ ಮೂಲಕ (ನೆಟ್ ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹಾಗೂ ಯು.ಪಿ.ಐ ಮೂಲಕ ಮಾತ್ರ) ಪಾವತಿಸುವುದು.

ಈ ರೀತಿ ಶುಲ್ಕ ಪಾವತಿಸಿದವರು ಸಂಬಂಧಪಟ್ಟ ಪರಿಶೀಲನಾ ಕೇಂದ್ರಗಳ ಮೂಲಕ ಕಾಲೇಜಿಗೆ ದಾಖಲಾತಿ ಹೊಂದಲು ದಿನಾಂಕ: 30-03-2021ರಿಂದ 05-04-2021ರವರೆಗೆ ಕಾಲಾವಕಾಶ ನೀಡಲಾಗಿದೆ. **ಈ ಅವಧಿಯ ನಂತರ ದಾಖಲಾತಿಗೆ ಅವಕಾಶವಿರುವುದಿಲ್ಲ. ಮೊದಲ ಮತ್ತು ಈ ಸುತ್ತಿನ ಅಭ್ಯರ್ಥಿಗಳಿಗೆ ಇದು ಕೊನೆಯ ಅವಕಾಶವಾಗಿದ್ದು, ಇದನ್ನು ಗಮನಿಸಲು ತಿಳಿಸಿದೆ.**

ಅಭ್ಯರ್ಥಿಯು ದಾಖಲಾತಿ ಶುಲ್ಕ ಪಾವತಿಸಿದ ನಂತರ ತಮಗೆ ಅನ್ವಯವಾಗುವ ಮೂಲ ದಾಖಲೆಗಳನ್ನು ಅನುಬಂಧ-6ರ ನಮೂನೆಯಲ್ಲಿರುವಂತೆ ಕ್ರಮವಾಗಿ ಜೋಡಿಸಿಕೊಂಡು ಸಂಬಂಧಪಟ್ಟ ಜಿಲ್ಲಾ ನೋಡಲ್ ಕೇಂದ್ರಗಳಿಗೆ ಹಾಜರಾಗುವುದು. ನೋಡಲ್ ಕೇಂದ್ರದಲ್ಲಿ ಅಧಿಕಾರಿಗಳು ಅಭ್ಯರ್ಥಿಯು ನಿಯಮಾನುಸಾರ ಶುಲ್ಕ ಪಾವತಿಸಿರುವ ಬಗ್ಗೆ ಹಾಗೂ ಮೂಲ ದಾಖಲೆಗಳನ್ನು ಹೊಂದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ದಾಖಲಾತಿ ಪತ್ರವನ್ನು ವಿತರಿಸುವರು.

**ಸೂಚನೆ:**

1. **ನಿಗದಿತ ದಿನಾಂಕದೊಳಗೆ ಶುಲ್ಕ ಪಾವತಿಸದ ಹಾಗೂ ಪಾವತಿಸಿ ನೋಡಲ್ ಕೇಂದ್ರದ ಮೂಲಕ ಕಾಲೇಜಿಗೆ ದಾಖಲು ಮಾಡಿಕೊಳ್ಳದೇ ಇರುವ ಅಭ್ಯರ್ಥಿಗಳ ಸೀಟು ರದ್ದಾಗುವುದು.**
2. **ಪ.ಜಾತಿ/ ಪ.ಪಂಗಡ ಕ್ಕೆ ಸೇರಿದ ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಆದಾಯ ಪ್ರಮಾಣ ಪತ್ರದಲ್ಲಿ ರೂ. 2,50,000/- ರ ಒಳಗಿನ ಆದಾಯ ಮಿತಿಯನ್ನು ಹೊಂದಿರಬೇಕು (ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು). ದಾಖಲಾತಿ ಪತ್ರ ಪಡೆಯುವ ಸಂದರ್ಭದಲ್ಲಿ ನೋಡಲ್ ಅಧಿಕಾರಿಗೆ ದಾಖಲಾತಿಗೆ ಸಂಬಂಧಪಟ್ಟ ಮೂಲ ದಾಖಲೆಗಳೊಂದಿಗೆ ಈ ಪ್ರಮಾಣ ಪತ್ರವನ್ನು ಒದಗಿಸುವುದು ಕಡ್ಡಾಯ. ಒಂದು ವೇಳೆ ಆದಾಯ ಮಿತಿ ರೂ. 2,50,000/-ಗಳಿಗಿಂತ ಅಧಿಕವಿರುವ ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಪಾವತಿಸುವುದು ಕಡ್ಡಾಯ.**

ಸಹಿ/-

ವಿಶೇಷಾಧಿಕಾರಿ

ಕೇಂದ್ರೀಕೃತ ದಾಖಲಾತಿ ಘಟಕ